ಅ) ಸದರಿ ಘಟಕದಲ್ಲಿ ರೋಗಿಗಳ ಸಂಖ್ಯೆ ಎಷ್ಟು ?

ಇ) ಕೆ. ಎಂ. ಸಿ. ಆಸ್ಪತ್ರೆಯಲ್ಲಿ ಸಲಹಾ ಸಮಿತಿ ಇದೆಯೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಇಲ್ಲ.

ಆ) ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜ್ ಆಸ್ಪತ್ರೆಯು ಸಾರ್ವಜನಿಕ ಆಸ್ಪತ್ರೆಯಾಗಿದ್ದು, ಇಲ್ಲಿ ಪ್ರತ್ಯೇಕ ಕ್ಯಾನ್ಸರ್ ಘಟಕವಿಲ್ಲದಿರುವುದರಿಂದ ಕ್ಯಾನ್ಸರ್ ರೋಗಿಗಳಿಗೆ ಶಸ್ತ್ರಚಿಕಿತ್ಸೆ ಮತ್ತು ವೈದ್ಯಕೀಯ ವಿಭಾಗಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಅನುಕ್ರಮವಾಗಿ ೫೫೪, ೬೦೩ ಮತ್ತು ೬೩೩ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ.

ಇ) ಇಲ್ಲ.

ರಾಜ್ಯದಲ್ಲಿ ರ್ಯಾಗಿಂಗ್ ಅನ್ನು ದಮನ ಮಾಡುವ ಬಗ್ಗೆ

೧೬೬(೧೬೭ ಬಿ. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, (ಅಥಣಿ).—ಮಾನ್ಯ ಗೃಹ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಳೆದ ವರ್ಷ ದಾವಣಗೆರೆಯಲ್ಲಿ ರ್ಯಾಗಿಂಗ್ ಮತ್ತೆ ತಲೆ ಎತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಳೆದ ೨ ವರ್ಷಗಳಲ್ಲಿ ಈ ಪಿಡುಗಿಗೆ ಬಲಿಯಾದ ಹಾಗೂ ದುರಂತಕ್ಕೆ ಒಳಪಟ್ಟ ಪ್ರಕರಣಗಳು ಎಷ್ಟು ? ಇದನ್ನು ತಡೆಗಟ್ಟಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಇ) ನೆರೆ ರಾಜ್ಯವಾದ ಕೇರಳದಲ್ಲಿ ರ್ಯಾಗಿಂಗ್ ತಡಗಟ್ಟುವ ಬಗ್ಗೆ ವಿಷೇಷ ಅಧಿನಿಯಮ ಒಂದನ್ನು ರಚಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ರಾಜ್ಯದಲ್ಲಿಯೂ ಈ ಪಿಡುಗನ್ನು ಹತ್ತಿಕ್ಕಲು ವಿಶೇಷ ಶಾಸನ ಒಂದನ್ನು ರಚಿಸಲು ಸರ್ಕಾರದವರು ಯೋಚಿಸುತ್ತಿರುವರೆ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಬಂದಿದೆ.

ಆ) ೧೯೮೫ರಲ್ಲಿ ೪ ಪ್ರಕರಣಗಳು ಮತ್ತು ೧೯೮೬ ರಲ್ಲಿ ೩ ಪ್ರಕರಣಗಳು ವರದಿಯಾಗಿರುತ್ತವೆ. ಈ ಪಿಡುಗನ್ನು ತಡೆಗಟ್ಟುವ ಸಲುವಾಗಿ ಸಂಶಯಾತ್ಮಕ ವ್ಯಕ್ತಿಗಳ ಮೇಲೆ ವಿಶೇಷ ನಿಗಾ ಇರಿಸುವಂತೆಯೂ ಮತ್ತು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ನೇರವಾಗಿ ಸಂಬಂಧ ಪಟ್ಟವರಿಗೆಲ್ಲಾ ತಿಳುವಳಿಕೆಯನ್ನು ನೀಡಲಾಗಿದೆ.

ಇ) ಇಲ್ಲ.

ಈ) ಇಲ್ಲ.

ಕನ್ನಡ ಕಾವಲು ಸಮಿತಿಯ ಖರ್ಚಿನ ವಿವರ ಕುರಿತು

೧೬೭(೧೭೮) ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕನ್ನಡ ಕಾವಲು ಸಮಿತಿಯು ರಚನೆ ಆದದ್ದು ಯಾವಾಗ, ಮತ್ತು ಸದಸ್ಯರ ಸಂಖ್ಯೆ ಎಷ್ಟು ?

ಆ) ಈವರೆಗೆ ಕಾವಲು ಸಮಿತಿಯ ಅಧ್ಯಕ್ಷರು ವಿವಿಧ ಜಿಲ್ಲೆಗಳಲ್ಲಿ ಮಾಡಿದ ಪ್ರವಾಸ ಎಷ್ಟು, ಕರೆದ ಸಭೆಗಳೆಷ್ಟು ?